ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**Bangalore Development Authority**

ಸಂಖ್ಯೆ : ಬೆಂ.ಅ.ಪ್ರಾ/ಅಸ/ಅಅ-3/ತಾಸ-4/ಪ್ರಾ.ಪ್ರ.ಪ/ಟಿ-257/2015-16, ದಿನಾಂಕ : 05 .10.2015

No. : Date :

ಅನುಸೂಚಿ-7
(ಉಪವಿಧಿ ಸಂಖ್ಯೆ: 5.3)
ಪ್ರಾರಂಭಿಕ ಪ್ರಮಾಣ ಪತ್ರ

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಇವರಿಗೆ,

ಶ್ರೀ ಸಿದ್ದಾರ್ಥ್ ಗುಪ್ತ, ನಿರ್ದೇಶಕರು,
ಮೆ॥ ಸಾಯಿಬ್ಯಾ ಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್,
ನಂ. 384, 9ನೇ ಮುಖ್ಯರಸ್ತೆ,
ಹೆಚ್.ಎಸ್.ಆರ್. ಬಡಾವಣೆ,
ಬೆಂಗಳೂರು 560102

ವಿಷಯ: ಕಾಮಗಾರಿಯ ಆರಂಭದ ಬಗ್ಗೆ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಾಗಮಂಗಲ ಗ್ರಾಮದ ಸರ್ವೆ ನಂ. 72 ರಲ್ಲಿ ನಿರ್ಮಿಸುತ್ತಿರುವ ತಳ+ನೆಲ+03 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 175 ವಸತಿ ಘಟಕಗಳ ಬಹುವಸತಿ ಕಟ್ಟಡಕ್ಕೆ ಅನುಮತಿ ನೀಡುವ ಕುರಿತು.

ಉಲ್ಲೇಖ:
1. ಮಂಜೂರಾತಿಯಾದ ನಕ್ಷೆ ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-3/ತಾಸ-4/ಪೂ/25/2014-15, ದಿನಾಂಕ: 27.10.2014.
2. ನಿಮ್ಮ ಅರ್ಜಿ ದಿನಾಂಕ: 25.07.2015.
3. ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: 4411, ದಿನಾಂಕ: 22.09.2015.

********

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಾಗಮಂಗಲ ಗ್ರಾಮದ ಸರ್ವೆ ನಂ. 72 ರಲ್ಲಿ ನಿರ್ಮಿಸುತ್ತಿರುವ ತಳ+ನೆಲ+03 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 175 ವಸತಿ ಘಟಕಗಳ ಬಹುವಸತಿ ಕಟ್ಟಡದ ನಕ್ಷೆಗೆ ಎಲ್.ಪಿ. ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-3/ತಾಸ-4/ಪೂ/25/2014-15, ದಿನಾಂಕ: 27.10.2014 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾತಿ ನೀಡಲಾಗಿದೆ. ಮುಂದುವರೆದಂತೆ ಉಲ್ಲೇಖ (2) ರ ಅರ್ಜಿಯಂತೆ, ಪ್ರಾಧಿಕಾರದಿಂದ ಉಲ್ಲೇಖ (1) ರಲ್ಲಿ ನೀಡಲಾಗಿರುವ ಮಂಜೂರಾತಿಯಂತೆ ಬಹುವಸತಿ ಕಟ್ಟಡದ ಆವರಣವನ್ನು ಕಾರ್ಯಪಾಲಕ ಅಭಿಯಂತರು (ಪೂ) ರವರು ದಿನಾಂಕ: 27.07.2015 ರಂದು ತನಿಖೆ ನಡೆಸಲಾಗಿ ಮತ್ತು ಗುರುತು ಮಾಡಿದ ನಿರ್ಮಿಸಿದ ಅಡಿಪಾಯವನ್ನು ಗುರುತು ಮಾಡಿದ, ಕೂಡಿಸಿದ ಅಂಕಣವನ್ನು ಹೋಲಿಸಿ ಪರಿವೀಕ್ಷಿಸಿ ಕಾಮಗಾರಿ ಕೆಲಸ ಪ್ರಾರಂಭಿಸಿರುವ **"ಬಹುವಸತಿ"** ಕಟ್ಟಡದ ಕಾಮಗಾರಿಯು ಮಂಜೂರಾದ ನಕ್ಷೆಯ ಮೇರೆಗೆ ಇದ್ದುದು ಕಂಡು ಬಂದಿದೆ. ಅದರಂತೆ ಸದರಿ **"ಬಹುವಸತಿ"** ಕಟ್ಟಡದ ಕಾಮಗಾರಿಯನ್ನು ಮುಂದುವರೆಸಲು ಈ ಕೆಳಕಂಡ ಷರತ್ತುಗೊಳಪಡಿಸಿ ಅನುಮತಿ ನೀಡಿದೆ.

1. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
2. ಕಾಮಗಾರಿಯು, ಅಂಕಣಗಳನ್ನು ಮಾಡಿಸುವ ಕಾರ್ಯ ಮುಕ್ತಾಯವಾದ ಹಂತವನ್ನು ತಲುಪಿದಾಗ, ಕಾರ್ಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು.
3. ನಕ್ಷೆ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ತಪ್ಪಿದ್ದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ರದ್ದು ಪಡಿಸುವುದಲ್ಲದೇ ಸ್ವಾಧೀನಾನುಭವ ಪತ್ರವನ್ನು ನೀಡಲಾಗುವುದಿಲ್ಲ.

ಆಯುಕ್ತರ ಪರವಾಗಿ
ಮಂಜೂರಾತಿ ನೀಡಿದವರ ಸಹಿ ಮತ್ತು ಹುದ್ದೆ ಮುದ್ರೆ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಪ್ರತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdiah Road, Kumarapark West, Bangalore - 560 020. Facsimile : 2334 5799, E-mail : bda@vsnl.com